# Social Science as a Science and an Art:

**ಸಮಾಜ ವಿಜ್ಞಾನ ಒಂದು ವಿಜ್ಞಾನವಾಗಿ ಮತ್ತು ಕಲೆಯಾಗಿ:**

- In earlier days a big controversy arose, weather Social Science is a science or not. Some one calls it as science, Ex- Ranke David, Chiggart, Havolda.
- Some scholars say, it is an art & it is not science. Ex:- Spencer & friends, Lord action, Pevolian.
- ಸಮಾಜ ವಿಜ್ಞಾನ ವಿಜ್ಞಾನವ್ರೋ ಅಥವಾ ಕಲೆಯೋ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ.
- ರಾಂಖೆ, ಡೇವಿಡ್, ಚಿಗ್ಗಾರ್ಟ್, ಮತ್ತು ಹಾವ್ರೋಲ್ಡಾ ಇವರುಗಳು ಸಮಾಜ ವಿಜ್ಞಾನ ವಿಜ್ಞಾನ ಎಂದರೆ ಸ್ಪೆನ್ಸರ್ ಮತ್ತು ಸ್ನೇಹಿತರು, ಲಾರ್ಡ್ ಆಕ್ಟನ್ ಮತ್ತು ಪೆವ್ರೊಲಿಯನ್ ಇವರುಗಳು ಸಮಾಜ ವಿಜ್ಞಾನ ಕಲೆಯೇ ಹೊರತು ವಿಜ್ಞಾನವಲ್ಲ ಎನ್ನುತ್ತಾರೆ.

- **Social Science is a Science:-**

  Before going to understand, Social Science is a science or not, first of all we have to know, what is science?

- Systematic Knowledge of discovering the truth is called Science. Or Science is a systematized body of general truths. Concerning definite Subject matter & established by an effective method.

  **ಸಮಾಜ ವಿಜ್ಞಾನ ಒಂದು ವಿಜ್ಞಾನವಾಗಿದೆ:**

  ಸಮಾಜ ವಿಜ್ಞಾನ ವಿಜ್ಞಾನವ್ರೋ ಅಥವಾ ಕಲೆಯೋ ಎಂಬುದನ್ನು ಅರಿಯುವುದಕ್ಕಿಂತ ಮುಂಚೆ ವಿಜ್ಞಾನ ಎಂಬುದರೇನು ಎಂಬುದನ್ನು ಅರಿಯುವುದು ಸೂಕ್ತ.

- ವಿಜ್ಞಾನವೆಂದರೆ ಸತ್ಯಾನ್ವೇಷಣೆ ಮಾಡುವ ವ್ಯವಸ್ಥಿತ ಜ್ಞಾನ. ಆದುದರಿಂದ

- It aims at discovering facts of the past as they really were.

  ಸಮಾಜ ವಿಜ್ಞಾನ ಸಹ ಸತ್ಯದ ಅನ್ವೇಷಣೆ ಮಾಡುವ ವಿಷಯವಾಗಿದ್ದು ಗತಕಾಲದಲ್ಲಿ ವಾಸ್ತವಿಕವಾಗಿದ್ದ ಸಂಗತಿಗಳನ್ನು ಶೋಧನೆ ಮಾಡಿ ವ್ಯವಸ್ಥಿತ ರೀತಯಲ್ಲಿ ತಿಳಿಸುವ ಗುರಿಯನ್ನು ಹೊಂದಿರುವುದರಿಂದ ಸಮಾಜ ವಿಜ್ಞಾನ ವಿಜ್ಞಾನವಾಗಿದೆ.

- As that of science Social Science is also discover the truth by the process of collecting the information, observation, verification and classification. That's why it is also called as Science.

  ಆದಷ್ಟು ಹೆಚ್ಚು ಸಂಗತಿಗಳನ್ನು ಸಂಗ್ರಹಿಸುವುದು, ವೀಕ್ಷಿಸುವುದು, ಪರಿಶೀಲಿಸುವುದು, ವರ್ಗೀಕರಿಸುವುದು ಮತ್ತು ಅದರ ಸಹಾಯದಿಂದ ನಿಜ ಸಂಗತಿಯನ್ನು ಅರಿಯುವುದು ಇವೇ ಮೊದಲಾದವು ಸಮಾಜ ವಿಜ್ಞಾನದಲ್ಲಿ ಸೇರಿಕೊಂಡಿರುವುದರಿಂದ ಸಮಾಜ ವಿಜ್ಞಾನ ವಿಜ್ಞಾನವಾಗಿದೆ.

- With the help of his article & divergent and critical thinking, Systematic observation, historian narrates the past. That's why it is called a Science.

  ಸಮಾಜ ವಿಜ್ಞಾನಿ ತನ್ನ ಅಧ್ಯಯನ ವಿಷಯಗಳನ್ನು ಕುರಿತು ವಿಮರ್ಶಾತ್ಮಕ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ವೀಕ್ಷಿಸಿ ವಿಚಾರ ಮಾಡಿ ಹಿಂದೆ ನಡೆದು ಹೋದುದನ್ನು ವರ್ಣಿಸುತ್ತಾನೆ, ಪ್ರಸ್ತುತ ಪಡಿಸುತ್ತಾನೆ. ಆದುದರಿಂದ ಇದು ವಿಜ್ಞಾನವಾಗಿದೆ.

- Like Science, Social Science is also having 4 essential elements, they are,
  - Systematized knowledge.
  - Definite subject matter.
  - Effective method.
  - Formulation of universal truth. That's why Social Science is Science.

  ವಿಜ್ಞಾನದಂತೆ ಸಮಾಜ ವಿಜ್ಞಾನ ಕ್ರಮಬದ್ಧ ಜ್ಞಾನ, ಪರಿಣಾಮಕಾರಿ ವಿಧಾನ, ನಿರ್ದಿಷ್ಟ ವಿಷಯವಸ್ತು ಹಾಗೂ ಸಾರ್ವತ್ರಿಕ ನಿಯಮಗಳ ನಿರೂಪಣೆಯಂತಹ ಅಂಶಗಳನ್ನು ಒಳಗೊಂಡಿರುವುದರಿಂದ ಸಮಾಜ ವಿಜ್ಞಾನ ವಿಜ್ಞಾನವಾಗಿದೆ.

## Social Science is not Science
### ಸಮಾಜ ವಿಜ್ಞಾನ ವಿಜ್ಞಾನವಲ್ಲ:

- It is not an accurate science as physics and chemistry are. It is concerned with experience of human beings & it has no practical uses or it has less profit.
  ಸಮಾಜ ವಿಜ್ಞಾನ ಬೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಷ್ಟು ನಿಖರವಾದ ವಿಜ್ಞಾನ ಅಲ್ಲ. ಏಕೆಂದರೆ ಇದಕ್ಕೆ ವ್ಯವಹಾರಿಕ ಪ್ರಯೋಜನಗಳು ಕಡಿಮೆ ಹಾಗೂ ಇದು ಪ್ರಧಾನವಾಗಿ ಮಾನವನ ಅನುಭವಗಳಿಗೆ ಸಂಬಂಧಿಸಿದಂತಹ ವಿಷಯವಾಗಿದೆ.

- In science, there is a chance for direct observation & practical to understand the some science concepts. But in Social Science there is no chance at all.
  ವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳನ್ನು ವೀಕ್ಷಿಸಿ ಪ್ರಯೋಗದ ಮೂಲಕ ಅವುಗಳನ್ನು ಪರೀಕ್ಷಿಸಬಹುದು. ಆದರೆ ಸಮಾಜ ವಿಜ್ಞಾನ ಸಂಬಂಧಿಸಿದ ಘಟನೆಗಳನ್ನು ವೀಕ್ಷಿಸಲು ಸಾಧ್ಯವಿಲ್ಲ. ಇವುಗಳನ್ನು ಗತಕಾಲದ ಕಣ್ಣುಗಳಿಂದ ಮಾತ್ರ ವೀಕ್ಷಿಸಲು ಸಾಧ್ಯ.

- Social Science does not have any definite subject matter. Ex :science- 2x2=4
  ಸಮಾಜ ವಿಜ್ಞಾನ ಖಚಿತವಾದಂತಹ ವಸ್ತು ವಿಷಯವನ್ನು ಹೊಂದಿರುವುದಿಲ್ಲ.

- There is no chance for universal judgments or truths.
  ಸಾರ್ವತ್ರಿಕ ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. (ವೈಯಕ್ತಿಕ ಭಿನ್ನತೆ, ಭಿನ್ನಾಭಿಪ್ರಾಯ ಮತ್ತು ವಸ್ತುನಿಷ್ಠತೆಯ ಕೊರತೆಗಳಿಂದ)
  ಆದುದರಿಂದ ಸಮಾಜ ವಿಜ್ಞಾನ ವಿಜ್ಞಾನವಲ್ಲ.

## History is an Art
**ಸಮಾಜ ವಿಜ್ಞಾನ ಒಂದು ಕಲೆ:**

- Art means the application of knowledge to solve practical problems of mankind. This is what Social Science stands for,
  ಮನುಕುಲದ ಪ್ರಾಯೋಗಿಕ ಸಮಸ್ಯೆಗಳನ್ನು ನಿವಾರಿಸಲು ಅನ್ವಯಿಸುವ ಜ್ಞಾನವೇ ಕಲೆ.
- Social Science is concerned with experience of human being & it illustrates the present. That's why it is an Art.
  ಮಾನವಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವ ವಿಷಯ ಸಮಾಜ ವಿಜ್ಞಾನ ವಾಗಿರುವುದರಿಂದ ಮತ್ತು ಗತಕಾಲದ ಘಟನೆಯ ಹಿನ್ನೆಲೆಯಲ್ಲಿ ವರ್ತಮಾನಕಾಲದ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರಿಂದ ಇದು ಕಲೆ.

- For the purpose of people's clear understanding Social Science experts use some artistic skills. That's why there is need of emotions & imaginations of Social Science experts. That's why it is an Art.
  ಸಮಾಜ ವಿಜ್ಞಾನಿಯು ತಾನು ಜನರಿಗೆ ತಲುಪಿಸಬೇಕಾದ್ದನ್ನು ತಲುಪಿಸಲು ಕೆಲವು ಕಲಾತ್ಮಕ ಕೌಶಲ್ಯಗಳನ್ನು ಬಳಸಬೇಕಾಗಿರುವುದರಿಂದ ಅಂದರೆ ಜೀವವಿಲ್ಲದ ಅಸ್ಥಿಪಂಜರಕ್ಕೆ ರಕ್ತ ಮಾಂಸಗಳನ್ನು ತುಂಬಿ ಜೀವಕಳೆ ಬರುವಂತೆ ಮಾಡಲು ಕಲೆಯ ಅವಶ್ಯಕತೆ ಇರುವುದರಿಂದ ಇದನ್ನು ಕಲೆ ಎನ್ನಬಹುದು. ಆದರೆ ಇಲ್ಲಿ ಸಮಾಜ ವಿಜ್ಞಾನಿಯ ಭಾವೋದ್ವೇಗ ಮತ್ತು ಕಲ್ಪನಾಶಕ್ತಿಯ ಅವಶ್ಯಕತೆ ಇದೆ.

- ಸಮಾಜ ವಿಜ್ಞಾನ ದತ್ತಾಂಶಗಳು ಮಾನವನ ಆಲೋಚನೆ ಮತ್ತು ಕ್ರಿಯೆಗಳ ಉತ್ಪಾದಕ ಅಂಶಗಳಾಗಿದ್ದು, ಇವು ಯಾವಾಗಲೂ ಬದಲಾವಣೆ ಹೊಂದುತ್ತಿರುತ್ತವೆ. ಈ ಕಾರಣದಿಂದಾಗಿ ಅವು ಸಾಮಾನ್ಯ ತತ್ವಗಳು ಮತ್ತು ನೀತಿಗಳನ್ನು ರಚಿಸಲು ಆಸ್ಪದ ಮಾಡಿಕೊಡುವುದಿಲ್ಲ. ಆದ್ದರಿಂದ ಸಮಾಜ ವಿಜ್ಞಾನ ಕಲೆ.

- ಸಮಾಜ ವಿಜ್ಞಾನ ಸಂಗತಿಗಳು ತುಂಬಾ ವ್ಯಾಪಕ ಮತ್ತು ವೈವಿಧ್ಯತೆಯಿಂದ ಕೂಡಿದ್ದು ಅವು ಏಕರೂಪತೆಯಿಂದ ಕೂಡಿರುವುದಿಲ್ಲ. ಆದ್ದರಿಂದ ಸಮಾಜ ವಿಜ್ಞಾನ ಒಂದು ಕಲೆ.

- ಸಮಾಜ ವಿಜ್ಞಾನ ಕೆಲ ಸಂಘಟಿತ ತಥ್ಯಾಂಶಗಳ ಜೊತೆ ವ್ಯವಹರಿಸುವುದು. ಇಂತಹ ತಥ್ಯಾಂಶಗಳನ್ನು ವೀಕ್ಷಣೆ ಮತ್ತು ಪ್ರಯೋಗಕ್ಕೆ ಒಳಪಡಿಸಲಾಗದು. ಈ ದೃಷ್ಟಿಯಿಂದ ಸಮಾಜ ವಿಜ್ಞಾನ ವಿಜ್ಞಾನವಾಗದೇ ಕಲೆಯಾಗಿದೆ.

- ಸಮಾಜ ವಿಜ್ಞಾನದಲ್ಲಿ ಖಂಡಿತವಾಗಿಯೂ ಭವಿಷ್ಯತ್ತು ಹೀಗೆ ಇರುತ್ತದೆ ಎಂದು ಊಹಿಸಲು ಆಗದು. ಅದರಂತೆ ಸಾಮಾನ್ಯೀಕರಣಗಳನ್ನು ರಚಿಸಲೂ ಆಗದು. ಆದ್ದರಿಂದ ಸಮಾಜ ವಿಜ್ಞಾನ ಕಲೆ.

- Lastly we can say that “Social Science is a science, because, it discover the truth, Social Science is an art too because it uses some artistic skills for explanations”.

ಒಟ್ಟಾರೆಯಾಗಿ **ಸಮಾಜ ವಿಜ್ಞಾನ ಸತ್ಯದ ಶೋಧನೆ ಮಾಡುವುದರಿಂದ ವಿಜ್ಞಾನ ಎಂತಲೂ ಹಾಗೂ ಅದನ್ನು ವಿವರಿಸಲು ಕಲಾತ್ಮಕ ಕೌಶಲ್ಯಗಳನ್ನು ಬಳಸುವುದರಿಂದ ಅದನ್ನು ಕಲೆ ಎಂದು ಕರೆಯಬಹುದಾಗಿದೆ.**